
# ಶುಭಾಂಶು ಅಲ್ಲ, ಶಶಾಂಕ!



■ ಪ್ರವೀಣ ಕುಲಕರ್ಣಿ

ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಹೆಸರನ್ನೀಗ ಭಾರತೀಯರು ಮಾತ್ರವಲ್ಲ, ಜಗತ್ತಿನ ಎಲ್ಲ ದೇಶಗಳ ಜನರೂ ಪಠಿಸುತ್ತಿದ್ದಾರೆ. ನಮ್ಮ ಭಾರತೀಯ ಶಾಲಾ–ಕಾಲೇಜುಗಳ ಮಕ್ಕಳ ಪಾಲಿಗಂತೂ ಶುಭಾಂಶು ಅವರ ಗಗನಯಾನದ ಯಶಸ್ಸೆಂದರೆ ನೆಲದ ಮೇಲಣ ನಕ್ಷತ್ರವೊಂದು ನಭಕ್ಕೆ ಚಿಮ್ಮಿದಂತಹ ಸಂಭ್ರಮ. ಆಕ್ಸಿಯಂ–4ರ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್) ಪ್ರವೇಶಿಸಿರುವ ಶುಭಾಂಶು, ಈ ಸಾಧನೆ ಮಾಡಿದ ಮೊದಲ ಭಾರತೀಯ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ಆ ಮೂಲಕ ದೇಶದ ಹಲವು ಬಾಹ್ಯಾಕಾಶ ಯೋಜನೆಗಳಿಗೆ ಭೀಮಬಲವನ್ನೂ ತಂದಿದ್ದಾರೆ. ಅತ್ಯಲ್ಪ ಗುರುತ್ವಾಕರ್ಷಣೆ ಶಕ್ತಿ ಇರುವ ವಾತಾವರಣದಲ್ಲಿ 14 ದಿನ ಇದ್ದು, ಹಲವು ಅನುಭವಗಳನ್ನು ಹೊತ್ತು ಬರಲಿದ್ದಾರೆ ಈ ಹೆಮ್ಮೆಯ ಗಗನಯಾತ್ರಿ. ಹಾಗೆಯೇ ಗಗನದಲ್ಲಿ ತೇಲುತ್ತಾ ನಮ್ಮ ಮೈಸೂರಿನಿಂದ ತಯಾರಾಗಿ ಹೋದ ಮಾವಿನ ರಸ ಮತ್ತು ಕ್ಯಾರೆಟ್ ಹಲ್ವಾವನ್ನು ಅವರು ಜತೆಯಲ್ಲಿರುವ ಗಗನಯಾತ್ರಿಗಳೊಂದಿಗೆ ಸವಿಯಲಿದ್ದಾರೆ.

ತಮ್ಮೊಂದಿಗೆ ಇತರ ಮೂವರು ಗಗನಯಾತ್ರಿಗಳನ್ನು ಹೊತ್ತ ‘ಡ್ರ್ಯಾಗನ್’ ಗಗನ ನೌಕೆಯು ಐಎಸ್‌ಎಸ್ ತಲುಪುತ್ತಿದ್ದಂತೆಯೇ ‘ಸೂಕ್ಷ್ಮ ಗುರುತ್ವಾಕರ್ಷಣೆಯ ಸನ್ನಿವೇಶದಲ್ಲಿ ಬದುಕುವುದನ್ನು ಕಲಿಯುತ್ತಿದ್ದೇನೆ ಮತ್ತು ಅನುಭವಗಳನ್ನು ಆನಂದಿಸುತ್ತಿದ್ದೇನೆ’ ಎಂದು ಶುಭಾಂಶು ಸಂದೇಶ ಕಳುಹಿಸಿದ್ದಾರೆ. ‘ನಿರ್ವಾತದಲ್ಲಿ ತೇಲುವುದು ನಿಜವಾಗಿಯೂ ಒಂದು ಅದ್ಭುತ ಅನುಭವ’ ಎನ್ನುವ ಅವರ ಮಾತು ಅಸಂಖ್ಯ ಭಾರತೀಯ ಮಕ್ಕಳಲ್ಲಿ ಹೊಸ ಕನಸು ಬಿತ್ತಿರಲಿಕ್ಕೂ ಸಾಕು.

ಗ್ರೂಪ್ ಕ್ಯಾಪ್ಟನ್ ಆಗಿರುವ ಶುಭಾಂಶು, ಭಾರತೀಯ ವಾಯುಪಡೆಯ ಹೆಮ್ಮೆಯ ಪೈಲಟ್. ಎರಡು ಸಾವಿರ ಗಂಟೆಗಳಷ್ಟು ಸಮಯ ವಿಮಾನ ಹಾರಾಟ ನಡೆಸಿದ ಅನುಭವವನ್ನೂ ಅವರು ಹೊಂದಿದ್ದಾರೆ. ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ), ಗಗನಯಾನಕ್ಕೆ ಆಯ್ದುಕೊಂಡ ಗಗನಯಾನಿಗಳಲ್ಲಿ ಇವರೂ ಒಬ್ಬರಾಗಿದ್ದಾರೆ. ಉತ್ತರ ಪ್ರದೇಶದ ಲಖನೌದಲ್ಲಿ 1985ರ ಅಕ್ಟೋಬರ್ 10ರಂದು ಜನಿಸಿದ ಶುಭಾಂಶು, ಬೆಂಗಳೂರಿನ ಐಐಎಸ್ಸಿಯಲ್ಲಿ ಎಂ.ಟೆಕ್ ಪದವಿ ಪಡೆದಿದ್ದಾರೆ. 2006ರಲ್ಲಿ ಭಾರತೀಯ ವಾಯುಪಡೆಗೆ ಸೇರಿದ ಅವರು, ಎಸ್‌ಯು–30ಎಂಕೆಐ, ಎಂಐಜಿ–21, ಎಂಐಜಿ–29, ಜಾಗ್ವಾರ್, ಡಾರ್ನಿಯರ್, ಎಎನ್–32 ಸೇರಿದಂತೆ ಹಲವು ಯುದ್ಧವಿಮಾನಗಳನ್ನು ಮುನ್ನಡೆಸಿದ ಅನುಭವಿ.

ಶುಭಾಂಶು ಪಾಲಿಗೆ 2019ರ ಆ ದಿನ ಎಂದಿಗೂ ಮರೆಯಲಾಗದ್ದು. ಅಂದು ಇಸ್ರೊದಿಂದ ಗಗನಯಾತ್ರಿಯಾಗಲು ಅವರಿಗೆ ಕರೆ ಬಂದಿತ್ತು. ಮರು ಮಾತಿಲ್ಲದೆ ಆ ಅವಕಾಶವನ್ನು ಒಪ್ಪಿಕೊಂಡಿದ್ದರು ಈ ಗ್ರೂಪ್ ಕ್ಯಾಪ್ಟನ್. ರಷ್ಯಾದ ಯೂರಿ ಗಾಗರಿನ್ ತರಬೇತಿ ಕೇಂದ್ರದಲ್ಲಿ ಕಠಿಣ ತರಬೇತಿಗೆ ಒಳಗಾದ ಶುಭಾಂಶು, ಅಲ್ಲಿಂದ ಬೆಂಗಳೂರಿನ ಇಸ್ರೊ ಕೇಂದ್ರಕ್ಕೆ ಬಂದು, ಅಲ್ಲಿಯೂ ಬಾಹ್ಯಾಕಾಶದ ಅಗತ್ಯಗಳನ್ನು ಮನಗಂಡರು. ಭಾರತದ ಗಗನಯಾನ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಅನಾವರಣ ಮಾಡಿದ ಗಗನಯಾನಿಗಳಲ್ಲಿ ಶುಭಾಂಶು ಕೂಡ ಒಬ್ಬರಾಗಿದ್ದರು. ಆಕ್ಸಿಮಂ–4ರ ಪೈಲಟ್ ಆಗಿ ಗಗನ ನೌಕೆಯನ್ನು ಮುನ್ನಡೆಸುವ ಮೂಲಕ ಶುಭಾಂಶು, ಭಾರತದ ಮಾನವಸಹಿತ ಬಾಹ್ಯಾಕಾಶ ಯಾನದ ಚಾರಿತ್ರಿಕ ಬಾಗಿಲನ್ನು ತೆಗೆದಿದ್ದಾರೆ.

ಪ್ರೀತಿಯ ಭಾರತೀಯರಿಗೆಲ್ಲ ಸಂದೇಶ ಕಳುಹಿಸಿದಂತೆಯೇ ತಮ್ಮ ಮನದನ್ನೆ, ಪತ್ನಿ ಕಾಮ್ನಾ ಅವರಿಗೂ ಶುಭಾಂಶು ಸಂದೇಶ ಕಳುಹಿಸಿದ್ದಾರೆ. ‘ಕುಟುಂಬದ ಎಲ್ಲರಿಗೂ ಧನ್ಯವಾದಗಳು. ಅದರಲ್ಲೂ ಎಲ್ಲ ರೀತಿಯ ಬೆಂಬಲಕ್ಕೂ ನಿಂತ ನಿನಗೆ ವಿಶೇಷ ಧನ್ಯವಾದಗಳು’ ಎಂದು ಪತ್ನಿಗೆ ಬರೆದ ಸಂದೇಶದಲ್ಲಿ ಅವರು ತಿಳಿಸಿದ್ದಾರೆ. ಲಖನೌದಲ್ಲಿ ಪ್ರಾಥಮಿಕ ಶಾಲೆ ಓದುವ ಹಂತದಿಂದಲೇ ಶುಭಾಂಶು ಮತ್ತು ಕಾಮ್ನಾ ಒಬ್ಬರನ್ನೊಬ್ಬರು ಬಲ್ಲವರು, ಆತ್ಮೀಯ ಸ್ನೇಹಿತರು. ದಂತವೈದ್ಯೆಯಾಗಿರುವ ಕಾಮ್ನಾ ಅವರಿಗೆ ಪತಿಯ ಸಾಧನೆ ಕುರಿತು ಎಲ್ಲಿಲ್ಲದ ಹೆಮ್ಮೆ. ‘ಮೂರನೇ ತರಗತಿ ಓದುತ್ತಿದ್ದ ದಿನಗಳಿಂದಲೂ ನಾನು ಅವರನ್ನು ಬಲ್ಲೆ. ನಾವೆಲ್ಲ ಅವರನ್ನು ಗುಂಜಾನ್ ಎಂದು ಕರೆಯುತ್ತಿದ್ದೆವು. ಸಂಕೋಚ ಸ್ವಭಾವದವರಾಗಿದ್ದ ಅವರು, ತರಗತಿಯಲ್ಲಿ ಶಾಂತವಾಗಿರುತ್ತಿದ್ದರು. ಈಗಿನ ಅವರ ಸಾಧನೆಯಿಂದ ದೇಶದ ಶಾಲೆಗಳಲ್ಲಿ ಸಂಭ್ರಮದ ಅಲೆ ಎಬ್ಬಿಸಿದ್ದಾರೆ ನೋಡಿ’ ಎಂದು ತಮ್ಮ ಪತಿಯ ಕುರಿತು ಹೆಮ್ಮೆಯಿಂದ ಹೇಳುತ್ತಾರೆ ಕಾಮ್ನಾ.

ಶುಭಾಂಶು ಅವರ ತಂದೆ–ತಾಯಿಗೆ ಮಗನ ಮೇಲೆ ಎಷ್ಟು ಅಭಿಮಾನವೋ ಅವರಿಗೆ ಬೆಂಬಲವಾಗಿ ನಿಂತ ಸೊಸೆಯ ಮೇಲೂ ಅಷ್ಟೇ ಪ್ರೀತಿ. ‘ಕಾಮ್ನಾ ಬೆಂಬಲ ಇಲ್ಲದಿದ್ದರೆ ಶುಭಾಂಶು ಇಷ್ಟು ಎತ್ತರಕ್ಕೆ ಹೋಗುವುದು ಸಾಧ್ಯವಿರಲಿಲ್ಲ’ ಎಂದು ಅವರು ಹೇಳುತ್ತಾರೆ. ಈ ಗಗನಯಾನಿಯ ಸಹೋದರಿ ಸುಚಿ ಅವರಂತೂ ‘ನಾವು ಚಂದ್ರನ ಮೇಲೆ ಪದಾರ್ಪಣೆ ಮಾಡಿದಷ್ಟು ಸಂತಸವಾಗುತ್ತಿದೆ’ ಎಂದು ಖುಷಿಪಡುತ್ತಾರೆ.

ಬಾಹ್ಯಾಕಾಶದಲ್ಲಿ ಭಾರತದ ಸಾಧನೆ ಹೆಮ್ಮೆ ಮೂಡಿಸುವಂತಿದೆ. ಆಸ್ಟ್ರೊಸ್ಯಾಟ್, ಚಂದ್ರಯಾನ–1 ಯೋಜನೆಗಳಲ್ಲದೆ, ಮಂಗಳ ಗ್ರಹದ ಕಕ್ಷೆಗೆ ಉಪಗ್ರಹ ಕಳುಹಿಸಿ ಬೀಗಿದ್ದ ಇಸ್ರೊ, ಚಂದ್ರನ ದಕ್ಷಿಣ ಧ್ರುವದಲ್ಲಿ ಮೊತ್ತಮೊದಲ ಬಾರಿಗೆ ಬಾಹ್ಯಾಕಾಶ ನೌಕೆಯನ್ನು ಇಳಿಸಿದ ಕೀರ್ತಿಗೂ ಭಾಜನವಾಗಿದೆ. ಚಂದ್ರನ ಅಂಗಳಕ್ಕೆ ಮಾನವಸಹಿತ ನೌಕೆಯನ್ನು ಕಳುಹಿಸಿಕೊಡುವ ಮಹಾತ್ವಾಕಾಂಕ್ಷೆಯನ್ನೂ ಇಸ್ರೊ ಹೊಂದಿದೆ. ಆ ನಿಟ್ಟಿನಲ್ಲಿ ಶುಭಾಂಶು ಅವರ ಯಾತ್ರೆ ಮೊದಲ ಮೆಟ್ಟಿಲಾಗಿದೆ. ಹೀಗಾಗಿ ಭಾರತದ ಪಾಲಿಗೆ ಅವರು ಶುಭಾಂಶು ಅಷ್ಟೇ ಅಲ್ಲ, ಶಶಾಂಕನೂ ಹೌದು! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65